Sri K. V. SHANKARA GOWDA.—They are are not allottees to this Government.

Sri S. MUKUNDA RAO.—Sir, they were allottees to this State and they were given the 1/4 pension by the Mysore Government excepting the scheme which had been formulated by the Madras Government. At that time, there was no proposal to have D. A. there as well as here in 1963. Now, the budget proposals are to give D. A. to the triple benefit people also. Why not this be extended to these people also ?

Sri K. V. SHANKARA GOWDA.— This is is a matter that has to be examined, Sir.

Sri J. B. MALLARADHYA.—Is it not a fact that under the re-organisation of States Act whatever benefits they were entitled to will hold good after integration ?

Sri K. V. SHANKARA GOWDA.—Yes.

Sri J. B. MALLARADHYA.—Then, why ars these people denied that benefit now ?

Sri K. V. SHANKARA GOWDA.—What they were getting at the time of re-organisation, they are getting. What the member wants to know is that the amount goes up to Rs. 30 and whether that benefit would be given to them. I said 'no'.

Sri S. MUKUNDA RAO.—Benefit proposed in the budget straight-away says "all those who are benefited under the triple benefit scheme". Why should this Government make a difference between the triple benefit scheme introduced by our Government and the triple benefit scheme they had at the time of re-organisation of the States ?

Sri K. V. SHANKARA GOWDA.—According to the scheme of Madras Government they are not eligible.

Sri S. MUKUNDA RAO.—According to our scheme, those teachers are not eligible but now you are making them eligible.

Sri K. V. SHANKARA GOWDA.—Whether they are to be made eligible or not is a point for examination. I will examine it.

Kannada Typewriters

38. Sri M. P. L. SASTRY (Nominated).—

Will the Minister for Agriculture and Education be pleased to state :—

(*a*) the number of Kannada Typewriters Government have brought for use at (i) District Level (ii) Divisional Level (iii) State Level ;

(*b*) whether the number of Kannada typists are available for work at the above levels ?

A.— Sri K. V. SHANKARA GOWDA (Minister for Agriculture and Education).—

(*a*) (i) District Level	...	7
(ii) Divisional Level	...	3
(iii) State Level	...	53

(*b*) Yes.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಕನ್ನಡ ಟೈಪ್‌ರೈಟರ್ಸ್ ಜಿಲ್ಲಾ ಮಟ್ಟದಲ್ಲಿ 7, ವಿಭಾಗ ಮಟ್ಟದಲ್ಲಿ 3, ಮತ್ತು ರಾಜ್ಯ ಮಟ್ಟದಲ್ಲಿ 53 ಇವೆ ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಈ ರಾಜ್ಯದಲ್ಲಿ ಕನ್ನಡ ಅಡಳಿತ ಭಾಷೆಯಾದ ಮೇಲೆ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ವಿಭಾಗ ಮಟ್ಟದಲ್ಲಿ ಹೆಚ್ಚಿನ ಕೆಲಸ ಇರುತ್ತದೆ, ಆದ್ದರಿಂದ ಕನ್ನಡ ಟೈಪ್‌ರೈಟರ್ಸ್‌ನ ಅವಶ್ಯಕತೆ ಅಲ್ಲಿ ತಾನೆ ಹೆಚ್ಚಾಗಿ ಇರಬೇಕಾದ್ದು ?

ಶ್ರೀ ಕೆ. ವಿ. ಶಂಕರಗೌಡ.—ಹೌದು, ಅಲ್ಲೇ ಜಾಸ್ತಿ ಇರಬೇಕು.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ತಾಲ್ಲೂಕು, ಜಿಲ್ಲಾ, ಮತ್ತು ವಿಭಾಗ ಮಟ್ಟದಲ್ಲಿ ಕನ್ನಡದ ಬಳಕೆ ಹೆಚ್ಚಾಗಬೇಕಾಗಿದ್ದರೆ — 19 ಜಿಲ್ಲೆಗಳು ಇವೆ 7 ಟೈಪ್‌ರೈಟರುಗಳನ್ನು ಕೊಟ್ಟಿದ್ದೀರಿ, 4 ಡಿವಿಜನ್‌ಗಳು ಇವೆ 3 ಟೈಪ್‌ರೈಟರುಗಳನ್ನು ಕೊಟ್ಟಿದ್ದೀರಿ, ಇಷ್ಟು ಕಡಿಮೆ ಟೈಪ್‌ರೈಟರು ಗಳನ್ನು ಸಪ್ಲೈ ಮಾಡಿದರೆ ಕನ್ನಡ ಅಡಳಿತ ಭಾಷೆಯಾಗುವುದಕ್ಕೆ ಪ್ರೋತ್ಸಾಹ ಕೊಟ್ಟ ಹಾಗಾಗುತ್ತದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಇದುವರೆಗೂ ಪ್ರೋತ್ಸಾಹ ಕೊಡುವುದಕ್ಕೆ ಆಗಿಲ್ಲ, ಇನ್ನು ಮುಂದೆ ಹೆಚ್ಚು ಪ್ರೋತ್ಸಾಹ ಕೊಡಬೇಕಾಗುತ್ತದೆ. ಕನ್ನಡ ಅಡಳಿತ ಭಾಷೆಯಾಗುವುದಕ್ಕೆ ತೀವ್ರವಾಗಿ ಎಲ್ಲಾ ಕ್ರಮಗಳನ್ನೂ ಕೈಗೊಳ್ಳರಾಗುತ್ತದೆ.

ಶ್ರೀ ಜೆ ಬಿ. ಮರ್ಲಾರಾಧ್ಯ.—ಈ ವರ್ಷದ ಮುಂಗಡ ಪತ್ರದಲ್ಲಿ ಕನ್ನಡ ಟೈಪ್‌ರೈಟರ್ಸ್ ಮತ್ತು ಕನ್ನಡ ಟೈಪಿಸ್ಟ್‌ಗಳ ನೇಮಕದ ಬಗ್ಗೆ ಖರ್ಚಿಗೆ ಒಂದಷ್ಟು ದುಡ್ಡು ಒದಗಿಸಲಾಗಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ನಾನು ಅದನ್ನು ನೋಡಿಲ್ಲ.

ಶ್ರೀ ಜೆ. ಬಿ. ಮರ್ಲಾರಾಧ್ಯ.—ನಮ್ಮ ಈ ಕೌನ್ಸಿರ್‌ನಲ್ಲಿ ಮತ್ತು ಅಸೆಂಬ್ಲಿಯಲ್ಲಿ ನಡೆಯತಕ್ಕ ಕಾರ್ಯಕಲಾಪಗಳನ್ನು ಕನ್ನಡ ಶೀಘ್ರಲಿಪಿಯಲ್ಲಿ ಬರೆದುಕೊಂಡು ಕನ್ನಡ ಟೈಪ್‌ರೈಟರ್‌ನಲ್ಲಿ ಟೈಪ್ ಮಾಡುತ್ತಾರೆಯರ್ಲಾ (ಇಲ್ಲದ್ದಾರೆಯರ್ಲಾ) ಈ ಜನಗಳಿಗೆ ಏನೂ ಸಂಭಾವನೆಯನ್ನು ಕೊಡದೇ ಬೇರೆಯವರಿಗೆ ಸಂಭಾವನೆ ಕೊಡುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಸರ್ಕಾರದ ಗಮನಕ್ಕೆ ಬಂದಿದೆ, ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜೆ. ಬಿ. ಮರ್ಲಾರಾಧ್ಯ.—ನಹಾನುಭೂತಿಯಿಂದ ಪರಿಶೀಲನೆ ಮಾಡಿ ಅವರಿಗೆ ಸಂಭಾವನೆ ಬರುವಂತೆ ಮಾಡಿಕೊಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದೆ.

ಶ್ರೀ ಎಂ. ಸಿ. ನರಸಿಂಹನ್.—63 ಟೈಪ್‌ರೈಟರ್ಸ್‌ಗೆ ದುಡ್ಡು ಖರ್ಚು ಮಾಡಿದ್ದೀರಾ ! ಅಥವಾ ಯಾರಾದರೂ ಡೊನೇಷನ್ ಕೊಟ್ಟಿದ್ದಾರೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಡೊನೇಷನ್ ಯಾರೂ ಕೊಡುವುದಿಲ್ಲ, ದುಡ್ಡು ಖರ್ಚು ಮಾಡಿದ್ದೇವೆ.

ಶ್ರೀ ಎಂ. ವಿ. ವೆಂಕಟಪ್ಪ.—ಈ ಎರಡು ಸದನಗಳಲ್ಲೂ ಮುಕ್ಕಾಲು ಮೂರು ವೀಸೆ ಪಾಲು ಸದಸ್ಯರು ಕನ್ನಡದಲ್ಲೇ ಭಾಷಣ ಮಾಡುತ್ತಾರೆ, ಅದನ್ನು ಕನ್ನಡದಲ್ಲೇ ಟೈಪ್ ಮಾಡಿ ಕೊಡುತ್ತಾರೆ. ಕನ್ನಡ ಟೈಪ್ ಮಾಡುವವರಿಗೆ ವರ್ಕ್ ರೋಡ್ ಜಾಸ್ತಿಯಾಗಿದೆ. ಸಂಬಳ ಮಾತ್ರ ಮೊದಲು ಎಷ್ಟು ಕೊಡುತ್ತಾ ಇದ್ದಿರೋ ಅಷ್ಟೇ ಕೊಡುತ್ತಾ ಇದ್ದೀರಿ, ಅವರಿಗೆ ಸ್ವಲ್ಪ ಹೆಚ್ಚು ಸಂಬಳ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರಗೌಡ.—ಶ್ರೀಮಾನ್ ಮರ್ಲಾರಾಧ್ಯರವರು ಇದೇ ಪ್ರಶ್ನೆ ಕೇಳಿದರು ಅದಕ್ಕೆ ಉಪ್ತರ ಕೊಟ್ಟಿದ್ದೇನೆ.

ಶ್ರೀ ಎಂ. ಗೋವರ್ಧನರಾವ್.—ಕಳೆದ 5 ವರ್ಷದಿಂದ ಕೆಲಸ ಮಾಡುತ್ತಾ ಇದ್ದಾರೆ, ದಯವಿಟ್ಟು ಅವರ ವಿಷಯ ಸ್ವಲ್ಪ ನೋಡಿ.

ಶ್ರೀ ಕೆ. ಎ. ಶಂಕರಗೌಡ.—ಪರಿಶೀಲನೆ ಮಾಡುತ್ತೇವೆ.

Sri M. C. NARASIMHAN.—May I know whether it is a fact that representations were made by private commercial institutions that grant or subvention or help should be given to them in order to popularise the Kannada typewriters and if so, whether that is considered ?

Sri K. V. SHANKARA GOWDA.—No such repersentation has come to the Government and therefore that question does not ariss.

Sri M. C. NARASIMHAN.—When you presided over some function of the Shorthand writers it appeared in press that they made such representations.

Sri K. V. SHANKARA GOWDA.—I have not presided over any function.

ಶ್ರೀ ಜೆ. ಬಿ. ಮರ್ಲಾರಾಧ್ಯ.—ದೇಶಾದ್ಯಂತ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದಾದರೆ ಸಾಕಾದಷ್ಟು ಪ್ರಮಾಣದಲ್ಲಿ ಇದರ ಅನುಭವ ಇರತಕ್ಕ ಟೈಪಿಸ್ಟ್‌ಗಳು ಸಿಕ್ಕುತ್ತಾರೆಯೇ ? ಅವರನ್ನು ನೇಮಕ ಮಾಡುವುದಕ್ಕೆ ತಕ್ಕ ಕ್ರಮ ಕೂಡಲೇ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಕೆ. ಎ. ಶಂಕರಗೌಡ.—ಹೆಚ್ಚು ಕಡಮೆ ಸಾಕಾದಷ್ಟು ಜನ ಇದ್ದಾರೆ. ಆದರೂ ಇನ್ನೂ ಕೆಲವು ಜನ ಬೇಕಾಗುತ್ತಾರೆ, ಅದಕ್ಕೆ ಸಾಕಾದಷ್ಟು ವಾತಾವರಣವನ್ನು ಕಲ್ಪನಬೇಕಾಗುತ್ತದೆ.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ದೇಶದಲ್ಲೆಲ್ಲಾ ಟೈಪ್‌ರೈಟರುಗಳನ್ನು ಕೊಡುವುದಕ್ಕೆ ಅವುಗಳ ಅಭಾವ ಇದೆಯೇ ? ಅಥವಾ ಸರ್ಕಾರದವರು ಕೊಂಡುಕೊಂಡರಾಯಿತು, ಸ್ವಲ್ಪ ಇದೆಯಲ್ಲಾ ಪರವಾಗಿಲ್ಲ ಎಂಬ ಭಾವನೆಯಿಂದ ಇದ್ದಾರೆಯೇ ?

ಶ್ರೀ ಕೆ. ಎ. ಶಂಕರಗೌಡ.—ಅಫಿಷಿಯರ್ ರ್ಯಾಂಗ್ಯೇಜ್ ಕನ್ನಡ ಮಾಡುವ ಬಗ್ಗೆ ತೀವ್ರ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ಟೈಪ್‌ರೈಟರ್ಸ್‌ನ್ನು ಒದಗಿಸಿಲ್ಲ.

ಶ್ರೀ ಎಂ. ಪಿ. ಎರ್. ಶಾಸ್ತ್ರಿ.—ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಆಡಳಿತ ಭಾಷೆ ಪೂರ್ಣವಾಗಿ ಕನ್ನಡ ಭಾಷೆ ಆದಾಗ ಎಷ್ಟು ಕನ್ನಡ ಟೈಪ್‌ರೈಟರ್ಸ್ ಬೇಕು, ಎಷ್ಟು ಜನ ಕನ್ನಡ ಟೈಪಿಸ್ಟ್‌ಗಳು ಬೇಕು ಎಂಬ ಬಗ್ಗೆ ಸರ್ಕಾರ ಏನಾದರೂ ಊಹೆ ಮಾಡಿದೆಯೇ ! ಆಲೋಚನೆ ಮಾಡಿದೆಯೇ !

ಶ್ರೀ ಕೆ. ಎ. ಶಂಕರಗೌಡ.—ಅದನ್ನು ಇನ್ನೂ ಆಲೋಚನೆ ಮಾಡಿಲ್ಲ.

ಶ್ರೀ ಎಂ. ಪಿ. ಎರ್. ಶಾಸ್ತ್ರಿ.—ಹಾಗಾದರೆ ಕನ್ನಡ ಶೀಘ್ರಲಿಪಿಗಾರರು ಯಾರಿದ್ದಾರೋ ಅವರಿಗೆ ಪ್ರೋತ್ಸಾಹ ಕೊಡದಿದ್ದರೆ ಕನ್ನಡ ಆಡಳಿತ ಭಾಷೆಯಾದಾಗ ಕನ್ನಡ ಶೀಘ್ರಲಿಪಿಗಾರರು ಸಿಕ್ಕುವುದಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎ. ಶಂಕರಗೌಡ.—ಬಂದಿದೆ.

ಶ್ರೀ ಎಂ. ಪಿ. ಎರ್. ಶಾಸ್ತ್ರಿ.—ಕನ್ನಡ ಶೀಘ್ರಲಿಪಿಗಾರರು ಮತ್ತು ಕನ್ನಡ ಟೈಪಿಸ್ಟ್ ಹೆಚ್ಚು ಪ್ರಮಾಣದಲ್ಲಿ ಬರುವುದಕ್ಕೆ ಅವರಿಗೇನಾದರೂ ಒಂದು ಉತ್ತೇಜನ ಕೊಡುವುದನ್ನು ಸರ್ಕಾರದವರು ಗಮನಿಸುವುದಕ್ಕಾಗುವುದಿಲ್ಲವೇ !

ಶ್ರೀ ಕೆ. ಎ. ಶಂಕರಗೌಡ.—ಕನ್ನಡ ಆಫಿಷಿಯರ್ ರ್ಯಾಂಗ್ಯೇಜ್ ಆದರೆ ಶೀಘ್ರಲಿಪಿಗಾರರು, ಟೈಪಿಸ್ಟ್‌ಗಳು ತಾವೇ ತಾವಾಗಿ ತಯಾರಾಗುತ್ತಾರೆ; ಆದ್ದರಿಂದ ಹೆಚ್ಚು ವಿಶೇಷವಾದಂತಹ ಸೌಲಭ್ಯ ಕಲ್ಪನೆ ಮಾಡಬೇಕಾದ ಅವಶ್ಯಕತೆ ಕಾಣುವುದಿಲ್ಲ.

ಶ್ರೀ ಎಂ. ಗೋವರ್ಧನರಾವ್.—ಕನ್ನಡ ರಾಜ್ಯ ಭಾಷೆಯಾಗಬೇಕು, ಅದಕ್ಕೆ ಪ್ರೋತ್ಸಾ ಕೊಡಬೇಕು ಎಂಬುದನ್ನು ಪ್ರತಿಪಾದಿಸುತ್ತಾ ಈ ಮೂರು ಜನರಲ್ಲಿ ಮರಾಠಾರಾಧ್ಯರು ಮಾತ ಶಾಸ್ತ್ರಿಗಳೇನೋ ಕನ್ನಡದಲ್ಲೇ ಪ್ರಶ್ನೆಗಳನ್ನು ಕೇಳಿದರು. ಶ್ರೀಮಾನ್ ನರಸಿಂಹನ್‌ರವರು ಏ ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ ಎಂದು ಕೇಳುತ್ತೇನೆ.

ಶ್ರೀ ವಿಶ್ವನಾಥಸ್ವಾಮಿ.—ಕಮರ್ಷಿಯಲ್ ಬೇಸಿಸ್ ಮೇರೆ ಟೈಪ್‌ರೈಟರ್ಸ್‌ನ್ನು ಒದಗಿಸುವ ವುದಕ್ಕೆ ಪ್ರಯತ್ನ ಮಾಡಲಾಗಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅವಶ್ಯಕತೆ ಬಂದಾಗ ಹಾಗೆ ಮಾಡಲಾಗುತ್ತದೆ.

Professors of Kannada in Government Colleges

39. Sri Y. S. PATIL (Graduates' Constituency).—

Will the Minister for Agriculture and Education be pleased to state :—

(*a*) the number of Professors working in the Department of Kannada in all the Government Colleges as on October 1967 ;

(*b*) the number of Professors appointed as Professors in Kannada ever since the estalishment of the 15 Government Colleges in the State ?

A.— Sri K. V. SHANKARA GOWDA (Minister for Agriculture and Education).—

(*a*) Nil.

(*b*) Nil.

ಶ್ರೀ ವೈ. ಎಸ್. ಪಾಟೀಲ್.—ಮೈಸೂರು ರಾಜ್ಯದ ಸರ್ಕಾರಿ ಕಾಲೇಜುಗಳಲ್ಲಿ ಕನ್ನಡಕ್ಕೆ ವಿದ್ಯಾರ್ಥಿಗಳಾದರೂ ಇದ್ದಾರೆಯೇ ?

ಶ್ರೀ ಕೆ. ವಿ. ಶಂಕರಗೌಡ.—ವಿದ್ಯಾರ್ಥಿಗಳು ಇದ್ದಾರೆ.

ಶ್ರೀ ಜೆ. ಬಿ. ಮರಾಠಾರಾಧ್ಯ.—ಕನ್ನಡ ಶಿಕ್ಷಣದಲ್ಲಿ ತರಬೇತಿಯಾದಂಥ ಪ್ರೊಫೆಸರುಗಳು, ರೀಡರುಗಳ ಅಭಾವದ ದೃಷ್ಟಿಯಿಂದ ಅಲ್ಲಿ ಯಾರೂ ಇಲ್ಲ ಅಂತ ನೇಮಕ ಮಾಡಿಲ್ಲವೋ ಅಥವಾ ಏನು ಕಾರಣದಿಂದ ನೇಮಕ ಮಾಡಿಲ್ಲ ?

ಶ್ರೀ ಕೆ. ವಿ. ಶಂಕರಗೌಡ.—ಕನ್ನಡ ಪ್ರೊಫೆಸರ್ ಹುದ್ದೆ ಇರುವುದು ಒಂದು. ಅದು ಬೆಂಗಳೂರು ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ, ಇಂಟರ್‌ಸ್ಟೇಟ್ ಸೀನಿಯಾರಿಟಿ ವಿಷಯದಲ್ಲಿ ಸ್ವಲ್ಪ ತಾಪತ್ರಯವಾಗಿರುವುದರಿಂದ ನೇಮಕ ಮಾಡುವುದಕ್ಕೆ ಆಗಿಲ್ಲ, ಅದು ನಿರ್ಧಾರವಾದ ಮೇರೆ ಮಾಡಲಾಗುತ್ತದೆ.

ಶ್ರೀ ಜೆ. ಬಿ. ಮರಾಠಾರಾಧ್ಯ.—ಈ ಅಧಿಕಾರ ವರ್ಗದವರ ಗೊಂದಾಟದಲ್ಲಿ ಕನ್ನಡ ವಿಭಾಗಕ್ಕೆ ಸಂಬಂಧಪಟ್ಟವರು ಕಷ್ಟಪಡಬೇಕಾದ ಸ್ಥಿತಿ ಬಂದಿದೆ. ಅವರಿಗೆ ಏನಾದರೂ ಆರೋಕೇಷನ್‌ನಲ್ಲಿ ಪ್ರೊಫೆಸರ್ ಅಂತರೋ ರೀಡರ್ ಅಂತರೋ ನೇಮಕ ಮಾಡಿ. ಕನ್ನಡ ಪ್ರಾಧ್ಯಾಪಕರು ಇಲ್ಲದೇ ಇದ್ದರೆ ಕನ್ನಡಕ್ಕೆ ಸರ್ಕಾರ ಪ್ರೋತ್ಸಾಹ ಕಾಲೇಜು ಮಟ್ಟದಲ್ಲಿ ಕೊಡುತ್ತಿಲ್ಲ ಎಂದು ಅಪಾದನೆ ಬರುತ್ತದೆ ಎಂದು ಇದನ್ನು ತಿಳಿಸುತ್ತಾ ಇದ್ದೇನೆ.

ಶ್ರೀ ಕೆ. ವಿ. ಶಂಕರಗೌಡ.—ಅದಷ್ಟು ಶೀಘ್ರವಾಗಿ ಮಾಡುತ್ತೇವೆ.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಸರ್ಕಾರಿ ಕಾಲೇಜುಗಳಲ್ಲಿ ಈ ಪ್ರಾಧ್ಯಾಪಕರನ್ನು ನೇಮಿಸುವಾಗ ಅಲ್ಲಿ ಆ ವಿಷಯವನ್ನು ಪ್ಯಾಸಿಂಗ್ ಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆಯ ಮೇರೆ ಏರ್ಪಾಡು ಮಾಡುತ್ತೀರಾ ಅಥವಾ ಆ ವಿಷಯದ ಪ್ರಾತಿನಿಧ್ಯದ ದೃಷ್ಟಿಯಿಂದ ನೇಮಕ ಮಾಡುತ್ತೀರಾ ?